MARCH 10, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಹಳ್ಳಿಗಳಲ್ಲಿ 'ಸಿಹಿ ಕ್ರಾಂತಿ'; ಜೇನು ಸಾಕಣೆದಾರರ ಶ್ರೇಯೋಭಿವೃದ್ಧಿಗೆ, ಕೇಂದ್ರದಿಂದ 'ಜೇನು ಅಭಿಯಾನ'.
- ಬಿರು ಬೇಸಿಗೆ ಹಿನ್ನೆಲೆ; ಹಗಲಿನಲ್ಲೇ ಹಾವುಗಳ ಗೋಚರಿಕೆ, ಸುರಕ್ಷಿತ ಅಂತರ ಕಾಯ್ದುಕೊಳ್ಳಲು, ಉರಗ ಸಂಶೋಧಕರ ಮನವಿ.
- 'ನಮ್ಮ ಪೊಲೀಸ್, ನಮ್ಮ ಹೆಮ್ಮೆ'; ಕರ್ನಾಟಕ ರಾಜ್ಯ ಪೊಲೀಸ್ ಮ್ಯಾರಥಾನ್, ರಾಜ್ಯಾದ್ಯಂತ ಯಶಸ್ವಿ.
- ಅಪರೂಪದ 43 ತಳಿಯ ಗೋದಿ ಬೆಳೆದ, ರೈತ ಚಂದ್ರಪ್ಪ ಹಾದಿಮನಿ, ಹೊಲದಲ್ಲಿ ಇಂದು ಕ್ಷೇತ್ರೋತ್ಸವ.

<><><>

ಈಗ ವಾರ್ತೆಗಳ ವಿವರ

<><><>

'ಜೇನು ಅಭಿಯಾನ ಯೋಜನೆ'ಯಡಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ, ಮನೋಜ್ ಕುಮಾರ್, 6 ರಾಜ್ಯಗಳ ಜೇನು ಸಾಕಣೆದಾರರಿಗೆ, 2 ಸಾವಿರದ 50ಕ್ಕೂ ಹೆಚ್ಚು ಜೇನು ಪೆಟ್ಟಿಗೆಗಳು ಮತ್ತು ಪೂರಕ ಪರಿಕರಗಳನ್ನು, ಆನ್ಲೈನ್‌ನಲ್ಲಿ ವಿತರಿಸಿದರು. ಹೊಸ ದಿಲ್ಲಿಯ ಖಾದಿ ಹಾಗೂ ಗ್ರಾಮೋದ್ಯೋಗದ, ರಾಜ್‌ಘಾಟ್ ಕಚೇರಿಯಿಂದ ವಿಡಿಯೊ ಸಂವಾದದ ಮೂಲಕ, 205 ಜೇನು ಸಾಕಣೆದಾರರಿಗೆ ಕಿಟ್‌ಗಳನ್ನು ವಿತರಿಸಿದರು. ಹಳ್ಳಿಗಳಲ್ಲಿ 'ಸಿಹಿ ಕ್ರಾಂತಿ'ಯನ್ನು ಹರಡಬೇಕೆಂಬ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೃಷ್ಟಿಕೋನಕ್ಕೆ ಅನುಗುಣವಾಗಿ, ಜೇನು ಸಾಕಣೆದಾರರ ಶ್ರೇಯೋಭಿವೃದ್ಧಿಗಾಗಿ 'ಜೇನು ಅಭಿಯಾನ' ಪ್ರಾರಂಭಿಸಲಾಗಿದೆ, ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭ ಮೇಳದಲ್ಲಿ, 12 ಕೋಟಿ ರೂಪಾಯಿಗೂ ಹೆಚ್ಚು, ಖಾದಿ ಉತ್ಪನ್ನಗಳ ಮಾರಾಟವಾಗಿದೆ ಎಂದರು. ಧಾರವಾಡದ ಜೇನು ಕೃಷಿಕರ ಬಳಗ ಕೇಂದ್ರದ ನಡೆಯನ್ನು ಶ್ಲಾಘಿಸಿದೆ.

<><><>

ಲೋಕಸಭಾ ಕ್ಷೇತ್ರಗಳ ವಿಂಗಡಣೆಯಲ್ಲಿ, ದಕ್ಷಿಣ ಭಾರತಕ್ಕೆ ಅನ್ಯಾಯ ಆಗದು; ಕಾಂಗ್ರೆಸ್ ವಿನಾಕಾರಣ ಗೊಂದಲ ಸೃಷ್ಟಿಸುತ್ತಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಕ್ಷೇತ್ರ ವಿಂಗಡಣೆಯಾದಲ್ಲಿ, ದಕ್ಷಿಣ ಭಾರತದಲ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆ ಆಗದು ಎಂದು, ಕೇಂದ್ರ ಗೃಹ ಖಾತೆ ಸಚಿವರು ಸ್ಪಷ್ಟ ಪಡಿಸಿದ್ದಾರೆ ಎಂದು ಸಚಿವ ಜೋಶಿ ತಿಳಿಸಿದರು.

<><><>

ಕಳೆದ ಎರಡು ತಿಂಗಳಿಂದ ಬಿಸಿಲ ಬೇಗೆ ರಾಜ್ಯಾದ್ಯಂತ ಏರುಗತಿಯಲ್ಲಿದೆ. ಧಗೆಯನ್ನು ತಡೆದುಕೊಳ್ಳುವುದು ಮನುಷ್ಯರಿಗೂ ಕಷ್ಟವಾಗಿರುವ, ಹವಾಮಾನ ವೈಪರಿತ್ಯದ ಈ ಕಾಲದಲ್ಲಿ, ಹಾವುಗಳ ಸಂತಾನೋತ್ಪತ್ತಿ ಮೇಲೆ ಪರಿಣಾಮ ಬೀರಬಹುದು ಎಂದು, ಉರಗ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಬಿರು ಬಿಸಿಲು ಹಾಗೂ ಸಂತಾನೋತ್ಪತ್ತಿ ಸಮಯದ ಕಾರಣ, ಸಾಮಾನ್ಯವಾಗಿ ನಿಶಾಚರಿಯಾದ ಹಾವುಗಳು ಈಗ, ಹಗಲಿನಲ್ಲಿ ಜನರ ಕಣ್ಣಿಗೆ ಬೀಳುತ್ತಿವೆ.

ಈ ಕುರಿತು ಒಂದು ವರದಿ...

*ಪಶ್ಚಿಮಘಟ್ಟದ ತಪ್ಪಲಿನ ನಿತ್ಯಹರಿದ್ವರ್ಣ ಕಾಡಿನಲ್ಲಿ, ಕಾಳಿಂಗ ಸರ್ಪಗಳು ಈಗ, ಅತೀ ಹೆಚ್ಚು ಕಾಣಸಿಗುತ್ತಿವೆ.*

*ರಾಜ್ಯದ ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಕಾಳಿಂಗ ಸರ್ಪ, ಬಯಲುಸೀಮೆ ಪ್ರದೇಶದಲ್ಲಿ, ನಾಗರಹಾವು, ಕೊಳಕಮಂಡಲ ಸೇರಿದಂತೆ, ವಿಷಕಾರಿಯಲ್ಲದ ಹತ್ತಾರು ಪ್ರಜಾತಿಯ ಹಾವುಗಳು ಈಗ ಗೋಚರಿಸುತ್ತಿವೆ.*

*ಹಾವುಗಳು ರೈತನ ಮಿತ್ರ. ಪರಿಸರದ ಸಮತೋಲನದಲ್ಲಿ ಹಾವುಗಳದ್ದು ಮಹತ್ವದ ಪಾತ್ರ. ಹೀಗಾಗಿ, ಹಾವುಗಳು ಕಂಡಾಗ ಸುರಕ್ಷತೆಯ ದೃಷ್ಟಿಯಿಂದ ಅಂತರ ಕಾಯ್ದುಕೊಳ್ಳುವುದು ಒಳ್ಳೆಯದು.*

*ಹಾವುಗಳ ಚಲನವಲನದ ಮೇಲೆ ಗಮನವಿಟ್ಟು, ಅರಣ್ಯ ಇಲಾಖೆಗೆ ಕರೆ ಮಾಡಿ, ಮಾಹಿತಿ ನೀಡುವಂತೆ, ಆಕಾಶವಾಣಿ ಮೂಲಕ ಮನವಿ ಮಾಡಿದ್ದಾರೆ, ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು ಗುಡ್ಡೇಕೇರಿಯ, ಕಾಳಿಂಗ ಸೆಂಟರ್ ಫಾರ್ ರೇನ್ ಫಾರೆಸ್ಟ್ ಇಕಾಲಜಿಯ, ಉರಗ ಸಂಶೋಧಕ, ಗೌರಿ ಶಂಕರ.*

<><><>

ವಿವೇಕ ಧ್ವನಿ 45 + ಗೌರಿ ಶಂಕರ ಧ್ವನಿ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಮನೆ ಬಳಕೆಗೆ ಸಣ್ಣ ಪ್ರಮಾಣದಲ್ಲಾದರೂ, ಗೋದಿ ಬೆಳೆದುಕೊಳ್ಳುವ ಅವಕಾಶವಿದೆ ಎಂದು ತೋರಿಸಿಕೊಟ್ಟಿದ್ದಾರೆ, ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು, ಮಳಲಿ ಗ್ರಾಮದ, ಪ್ರಗತಿಪರ ಕೃಷಿಕ ಚಂದ್ರಪ್ಪ ಹಾದಿಮನಿ. 43 ಪ್ರಜಾತಿಗೆ ಸೇರಿದ, ಅಪರೂಪದ ಹಾಗೂ ವಿಶಿಷ್ಟ ತಳಿಯ ಗೋದಿಗಳನ್ನು, ಕೇವಲ ಅರ್ಧ ಎಕರೆಯ, ಸಣ್ಣ ತಾಕುಗಳಲ್ಲಿ ಬೆಳೆಸಿ, ಯಶಸ್ವಿಯಾಗಿದ್ದಾರೆ. ಸಹಜ ಸಮೃದ್ಧ, ದೇಶದ ವಿವಿಧ ಭಾಗಗಳಿಂದ ಸಂಗ್ರಹಿಸಿದ ಗೋದಿ ತಳಿಗಳು ಒಂದಕ್ಕಿಂತ ಒಂದು ಭಿನ್ನ. ಮಧ್ಯಪ್ರದೇಶದ ಮುಂಡಪಿಸಿ, ಉತ್ತರಪ್ರದೇಶದ ಬೂದು ಬಣ್ಣದ ಕುದ್ರತ್ ಗೋದಿ ತಳಿ, ರಾಜಸ್ಥಾನದ ದುಂಡನೆ ಕಾಳಿನ ಪಿತಾಂಬರಿ ತಳಿ ಹಾಗೂ ಕಪ್ಪು ಕಾಳಿನ, ಗೋದಿ ತಳಿ ಸಹ ಚಂದ್ರಪ್ಪ ಅವರ ಹೊಲದಲ್ಲಿ ಜಾಗೆ ಪಡೆದಿವೆ.

ಹುಬ್ಬಳ್ಳಿ, ಶಿಗ್ಗಾವಿ ಹೆದ್ದಾರಿಯ, ತಡಸ ಕ್ರಾಸ್ ಬಳಿಯ ಮಳಲಿ ಗ್ರಾಮದಲ್ಲಿ, ಇಂದು ಗೋದಿ ಬೆಳೆ ಕ್ಷೇತ್ರೋತ್ಸವ ನಡೆಯಲಿದೆ. ನೂರಾರು ಆಸಕ್ತ ರೈತರು ಪಾಲ್ಗೊಳ್ಳಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ, ರೈತ ಚಂದ್ರಪ್ಪ ಹಾದಿಮನಿ.

<><><>

ರೈತ ಚಂದ್ರಪ್ಪ ಹಾದಿಮನಿ ಧ್ವನಿ 45 ಸೆಕೆಂದುಗಳು

<><><>

'ನಮ್ಮ ಪೊಲೀಸ್, ನಮ್ಮ ಹೆಮ್ಮೆ' ಘೋ  'ವಾಕ್ಯದಡಿ, ಕರ್ನಾಟಕ ರಾಜ್ಯ ಪೊಲೀಸ್ ಮ್ಯಾರಥಾನ್‌ಗೆ, ಗೃಹ ಖಾತೆ ಸಚಿವ ಜಿ.ಪರಮೇಶ್ವರ್, ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ, ಚಾಲನೆ ನೀಡಿದರು. ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಶಾಖೆಯ ಮುಖ್ಯ ಪ್ರಧಾನ ವ್ಯವಸ್ಥಾಪಕಿ, ಜೂಹಿ ಸ್ಮಿತಾ ಸಿನ್ಹಾ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು. ಪೊಲೀಸ್ ಸಿಬ್ಬಂದಿ, ಸೈನಿಕರು, ಕ್ರೀಡಾಪಟುಗಳು ಸೇರಿದಂತೆ ಸಾವಿರಾರು ಜನ ಓಟದಲ್ಲಿ ಭಾಗಿಯಾಗಿದ್ದರು.

<><><>

ಹುಬ್ಬಳ್ಳಿಯ ಕಿತ್ತೂರು ಚನ್ನಮ್ಮ ವೃತ್ತದಿಂದ ಆರಂಭವಾದ, ಪೊಲೀಸ್ ಕ್ಷಮತೆ ಓಟ, ತೋಳನಕೆರೆ ತಟದಲ್ಲಿ ಮುಕ್ತಾಯಗೊಂಡಿತು. ಸಾವಿರದ ಐನೂರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.

<><><>

ಚಿಕ್ಕಮಗಳೂರಿನಲ್ಲಿ ಆಯೋಜಿಸಿದ್ದ, ಫಿಟ್ನೆಸ್ ರನ್ ಮ್ಯಾರಾಥಾನ್‌ಗೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ವಿಕ್ರಂ ಆಮಾಟೆ ಚಾಲನೆ ನೀಡಿದರು. ಸಾವಿರದ 500 ಕ್ಕೂ ಹೆಚ್ಚು ಜನ, ಭಾಗವಹಿಸಿದ್ದರು.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕಿನ ಸಾಣಾಪುರದಲ್ಲಿ, ಇಸ್ರೇಲ್ ಪ್ರಜೆ ಹಾಗೂ ಹೋಂ ಸ್ಟೇ ಮಾಲೀಕರ ಮೇಲೆ ನಡೆದ, ಹಲ್ಲೆ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ, ಮೂವರು ಆರೋಪಿಗಳನ್ನು ಪೊಲೀಸರು, ಬಂಧಿಸಿದ್ದಾಗಿ ಗೃಹ ಖಾತೆ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದ ಸಚಿವರು, ಇದೊಂದು ದುರದೃ ್ಟಕರ ಘಟನೆ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಉನ್ನತ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ ಮುಂದುವರಿದಿದೆ ಎಂದರು. ಪ್ರಕರಣದಲ್ಲಿ ಇಬ್ಬರು ಗಂಗಾವತಿ ಮೂಲದ ಆರೋಪಿಗಳನ್ನು ಬಂಧಿಸಿದ್ದು, ಮೂರನೇ ಆರೋಪಿ ಬಂಧನಕ್ಕೆ ಪೊಲೀಸರು ಜಾಲ ಬೀಸಿದ್ದಾರೆ. ವಿದೇಶಿ ಪ್ರವಾಸಿಗರ ರಕ್ಷಣೆಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ. ಅನಧಿಕೃತ ಹೋಂ ಸ್ಟೇ ನಡೆಸುವವರ ಮೇಲೂ, ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

'ಬಹುತ್ವ ಸಂಸ್ಕೃತಿ', ಕಾಲ ಮತ್ತು ದೇಶಗಳನ್ನು ಮೀರಿದ ವಾಸ್ತವ; ಸಂಸ್ಕೃತಿಗಳ ನಡುವೆ ಹಿಂದಿನ ಕಾಲದಲ್ಲಿ ಸಂಘ ್ಗಗಳು ಇದ್ದವು. ಈಗ ನಾವು ಅನುಸಂಧಾನದ ಕಾಲದಲ್ಲಿದ್ದೇವೆ. ಸಂಸ್ಕೃತಿಗಳ ನಡುವೆ ಸಂವಾದ, ಸಂವಹನ ಏರ್ಪಟ್ಟಾಗ, ಅವುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದು, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಹೇಳಿದ್ದಾರೆ.

ಕುವೆಂಪು ಭಾ ಾ ಭಾರತಿ ವತಿಯಿಂದ, ಚಿತ್ರದುರ್ಗದಲ್ಲಿ ಆಯೋಜಿಸಿದ್ದ, ಗೌರವ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ಪ್ರದಾನ ಕಾರ್ಯಕ್ರಮಕ್ಕೆ, ಚಾಲನೆ ನೀಡಿ, ಅವರು ಮಾತನಾಡಿದರು. ಪ್ರಶಸ್ತಿ ಪುರಸ್ಕೃತರ ಕೈಪಿಡಿ ಬಿಡುಗಡೆ ಮಾಡಿ, ಸಾಧಕರನ್ನು ಸಚಿವರು ಸನ್ಮಾನಿಸಿದರು. ಸಾಹಿತಿ ಕೆ.ಮರುಳಸಿದ್ದಪ್ಪ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

ಮಂಗಳೂರಿನ ಸುರತ್ಕಲ್ ಸಮೀಪದ, ಸಸಿಹಿತ್ಲು ಬೀಚ್ ನಲ್ಲಿ ಮುಕ್ತಾಯಗೊಂಡ, ಅಂತಾರಾಷ್ಟ್ರೀಯ ಸ್ಟ್ಯಾಂಡ್ ಅಪ್ ಪ್ಯಾಡಲ್ ಸ್ಪರ್ಧೆ, 'ಇಂಡಿಯಾ ಪ್ಯಾಡಲ್ ಫೆಸ್ಟಿವಲ್'ನ, 18 ವರ್ಷದೊಳಗಿನವರ ವಿಭಾಗದ, ಸಮಗ್ರ ಚಾಂಪಿಯನ್ ಆಗಿ, ಪ್ಯಾಡ್ಲರ್ ಆಕಾಶ್ ಪೂಜಾರ, ಹೊರಹೊಮ್ಮಿದ್ದಾರೆ. ಪುರುಷರ ವಿಭಾಗದಲ್ಲಿ ಸ್ಪೇನ್‌ನ ಆಂಟೊನಿಯೊ ಮೊರಿಲ್ಲೊ ಮತ್ತು ಮಹಿಳೆಯರ ವಿಭಾಗದಲ್ಲಿ, ಸ್ಪೇನ್‌ನ ಎಸ್ಪೆರಾಜ್ಜ ಬರೆರಾಸ್ ಸಮಗ್ರ ಚಾಂಪಿಯನ್ ಪಟ್ಟ ಅಲಂಕರಿಸಿದರು. ಇಂಡೊನೇಷ್ಯಾದ ಕೀಫಿ ಅನರ್ಫ್ಯ ಪ್ರಣೊತೊ ಮತ್ತು ಥಾಯ್ಲೆಂಡ್ ನ ಮಾರ್ಟಿನ್ ಪಟುಂಸ್ವಾನ್, ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ದಿನಾಚರಣೆ. ಮಹತ್ವದ ಕಟ್ಟಡಗಳು, ಕೈಗಾರಿಕೆಗಳು, ಅಣು ಸ್ಥಾವರಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಕ್ಷಣೆಯ ಹೊಣೆ ಹೊತ್ತಿರುವ, ಸಿ.ಐ.ಎಸ್.ಎಫ್. ಸಂಸ್ಥಾಪನಾ ದಿನಾಚರಣೆ.

<><><>

ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರ, ಇಂದು ಮತ್ತು ನಾಳೆ, ಉದಯೋನ್ಮುಖ 'ವಿಜ್ಞಾನ ಲೇಖಕರ ಕಮ್ಮಟ' ಆಯೋಜಿಸಿದೆ. 50 ಲೇಖಕರು ಪಾಲ್ಗೊಳ್ಳಲಿದ್ದಾರೆ.

<><><>

ರಾಜ್ಯದ ಉಭಯ ಸದನಗಳಲ್ಲಿ, ಬಜೆಟ್ ಕಲಾಪ ಇಂದು ಮುಂದುವರಿಯಲಿದೆ.

<><><>

ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಸತ್ರ, ಇಂದು ಆರಂಭವಾಗಲಿದೆ. ಏಪ್ರಿಲ್ 4ರ ವರೆಗೆ ನಡೆಯಲಿರುವ, ಅಧಿವೇಶನದಲ್ಲಿ, ಒಟ್ಟು 20 ಸಭೆಗಳು ನಡೆಯಲಿವೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಹಳ್ಳಿಗಳಲ್ಲಿ 'ಸಿಹಿ ಕ್ರಾಂತಿ'; ಜೇನು ಸಾಕಣೆದಾರರ ಶ್ರೇಯೋಭಿವೃದ್ಧಿಗೆ, ಕೇಂದ್ರದಿಂದ 'ಜೇನು ಅಭಿಯಾನ'.
- ಬಿರು ಬೇಸಿಗೆ ಹಿನ್ನೆಲೆ; ಹಗಲಿನಲ್ಲೇ ಹಾವುಗಳ ಗೋಚರಿಕೆ, ಸುರಕ್ಷಿತ ಅಂತರ ಕಾಯ್ದುಕೊಳ್ಳಲು, ಉರಗ ಸಂಶೋಧಕರ ಮನವಿ.
- 'ನಮ್ಮ ಪೊಲೀಸ್, ನಮ್ಮ ಹೆಮ್ಮೆ'; ಕರ್ನಾಟಕ ರಾಜ್ಯ ಪೊಲೀಸ್ ಮ್ಯಾರಥಾನ್, ರಾಜ್ಯಾದ್ಯಂತ ಯಶಸ್ವಿ.

- ಅಪರೂಪದ 43 ತಳಿಯ ಗೋದಿ ಬೆಳೆದ, ರೈತ ಚಂದ್ರಪ್ಪ ಹಾದಿಮನಿ, ಹೊಲದಲ್ಲಿ ಇಂದು ಕ್ಷೇತ್ರೋತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>